<u>ಹಿರಿಯ ದಿವಾಣಿ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಬನಹಟ್ಟಿ</u>

ಅಸಲು ದಾವಾ ಸಂ.120/2021
ಸಿಡಬ್ಲ್ಯೂ-2

| | | |
|---|---|---|
| ಹೆಸರು | : | ರವೀಂದ್ರ ಭೂತಿ |
| ತಂದೆಯ ಹೆಸರು | : | ಚಂದ್ರಶೇಖರ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವಕೀಲರು |
| ವಾಸಸ್ಥಳ | : | ಬನಹಟ್ಟಿ |

ದಿನಾಂಕಃ 03-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ-</u>

ನಾನು 1992 ರಿಂದ ವಕೀಲ ವೃತ್ತಿಯೊಂದಿಗೆ ದಸ್ತು ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ನಿಡಿ-16 ರಲ್ಲಿ ಸಾಕ್ಷಿ ತನ್ನ ಸಹಿ ಗುರುತಿಸಿರುವುದರಿಂದ ಅದನ್ನು ನಿಡಿ-16 ಸಿ ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಸಾಕ್ಷಿದಾರರು ಹಾಗೂ ಪಕ್ಷಗಾರರು ಸದರಿ ದಾಖಲೆಗೆ ಸಹಿ ಮಾಡಿರುವುದಿಲ್ಲ.

<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಬಿ.ಎನ್.ಜಿ. ವಕೀಲರಿಂದ</u>

ಸಾಮಾನ್ಯವಾಗಿ ಯಾವುದೇ ದಾಖಲೆಗೆ ಸಹಿ ಹಾಕಲು ಅದರಲ್ಲಿರುವ ಸಂಗತಿಗಳನ್ನು ಓದಿ ತಿಳಿದುಕೊಂಡ ನಂತರ ಸಹಿ ಮಾಡುತ್ತೇನೆ. ಸಾಮಾನ್ಯವಾಗಿ ಯಾವುದೇ ದಾಖಲೆಗಳಿಗೆ ಪಕ್ಷಗಾರರು ಸಹಿ ಮಾಡಿದ ನಂತರ ಸಾಕ್ಷಿದಾರರು ಸಹಿ ಹಾಕತ್ತಾರೆ ಎಂದರೆ ಸರಿ. ಸುಭದ್ರಾ ಹಿಂಡಿವಳಿ ಮತ್ತು ಸಂಗೀತಾ ಚೋಳಗಿ ಇವರು ನನ್ನ ಸಮಕ್ಷಮ ನಿಡಿ-16 ಕ್ಕೆ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕಛೇರಿ ನಮ್ಮ ಮನೆಯಲ್ಲಿದೆ ಎಂದರೆ ಸರಿ. ನಿಡಿ-16 ನ್ನು ನಾನೇ ಬೆರಳಚ್ಚು ಮಾಡಿಸಿ ಪಕ್ಷಗಾರರು ಸಹಿ ಮಾಡಿದ ನಂತರ ಸಾಕ್ಷಿದಾರರು ಮತ್ತು ನಾನು ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ದಸ್ತು ಮಾಡಿ, ಸಹಿ ಹಾಕಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- ವಾದಿ ಪರ ಶ್ರೀ ಎಂಜಿಕೆ ವಕೀಲರಿಂದ</u>

ರೂ.100/- ಕ್ಕಿಂತ ಹೆಚ್ಚಿನ ಯಾವುದೇ ಸ್ಥಿರಾಸ್ತಿ ಒಬ್ಬರಿಂದ ಒಬ್ಬರಿಗೆ ವರ್ಗಾವಣೆಯಾಗಬೇಕಾದರೆ ನೋಂದಣಿ ದಾಖಲೆಯ ಮೂಲಕ ಮಾತ್ರ ಮಾಡಬೇಕಾಗುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA

Digitally signed by ASHAPPA
Date: 2026.02.03 17:16:51 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ